ಕರ್ನಾಟಕ ಸರ್ಕಾರ
ಕಾಲೇಜು ಶಿಕ್ಷಣ ಇಲಾಖೆ

ಸಂಖ್ಯೆ:ಕಾಶಿಇ/ಶೈವಿ/22/ಸುತ್ತೋಲೆ/2023-24

ಕಾಲೇಜು ಶಿಕ್ಷಣ ಆಯುಕ್ತರ ಕಛೇರಿ,
ಶೇಷಾದ್ರಿ ರಸ್ತೆ, ಬೆಂಗಳೂರು - 560001,
ದಿನಾಂಕ : 06.01.2024.

## ಸುತ್ತೋಲೆ

ವಿಷಯ: ಭಾರತದ ಸ್ವಾತಂತ್ರ್ಯದ ಶತಮಾನೋತ್ಸವದ ಆಚರಣೆಯ ಪೂರ್ವಸಿದ್ಧತೆಯ ಅಂಗವಾಗಿ. "ವಿಕಸಿತ ಭಾರತ-2047" ರ 'ಯುವಧ್ವನಿ' ಯಲ್ಲಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿಗಳು ಭಾಗವಹಿಸುವ ಕುರಿತು.

ಉಲ್ಲೇಖ: ಕೆ.ಎಸ್.ಹೆಚ್.ಇ,ಸಿ/135/ವಿಕ್-ಭಾ/2023-24/879, ದಿನಾಂಕ: 16-12-2023

*********

**ಪೀಠಿಕೆ:** 2047ನೇ ಇಸವಿಗೆ ಭಾರತ ದೇಶಕ್ಕೆ ಸ್ವಾತಂತ್ರ್ಯ ದೊರೆತು ನೂರು ವರ್ಷಗಳಾಗುತ್ತವೆ. ಸ್ವಾತಂತ್ರ್ಯ ಶತಮಾನೋತ್ಸವದ ಆಚರಣೆಯ ಅಂಗವಾಗಿ 2047ನೇ ಸಾಲಿನ ವೇಳೆಗೆ ಭಾರತವನ್ನು ಅಭಿವೃದ್ಧಿ ಹೊಂದಿದ ರಾಷ್ಟ್ರವನ್ನಾಗಿ ರೂಪಿಸಲು, ಇಂದಿನ ಯುವಜನರ ಕನಸುಗಳು, ಅನಿಸಿಕೆಗಳು ಮತ್ತು ಸಲಹೆಗಳು ಈ ದಿಸೆಯಲ್ಲಿ ಅತ್ಯಂತ ಪ್ರಮುಖವಾಗುತ್ತವೆ. ಆದ್ದರಿಂದ ಭಾರತ ಸರ್ಕಾರವು **"ವಿಕಸಿತ ಭಾರತ @ 2047 ಪರಿಕಲ್ಪನೆಯ ಕುರಿತು ಅಭಿಪ್ರಾಯಗಳು: ಯುವಧ್ವನಿ ವೇದಿಕೆ"** ಎನ್ನುವ ಕಾರ್ಯಕ್ರಮವನ್ನು ರೂಪಿಸಿ, ಭಾರತದ ಆರ್ಥಿಕ ಬೆಳವಣಿಗೆ, ಸಾಮಾಜಿಕ ಪ್ರಗತಿ, ಪರಿಸರ ಸುಸ್ಥಿರತೆ ಮತ್ತು ಉತ್ತಮ ಆಡಳಿತ ಸೇರಿದಂತೆ ಅಭಿವೃದ್ಧಿಯ ವಿವಿಧ ವಿಷಯಗಳ ಕುರಿತು ಯುವಜನತೆಯ ಅಭಿಪ್ರಾಯಗಳನ್ನು ಸಂಗ್ರಹಿಸುತ್ತಿದೆ. ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಅತ್ಯುತ್ತಮ ಅಭಿಪ್ರಾಯಗಳನ್ನು ಹಂಚಿಕೊಳ್ಳುವ ಯುವಕ-ಯುವತಿಯರಿಗೆ ಆಕರ್ಷಕ ಬಹುಮಾನಗಳನ್ನು ಘೋಷಿಸಲಾಗಿದೆ.

********

ಭಾರತದ ಸ್ವಾತಂತ್ರ್ಯದ ಶತಮಾನೋತ್ಸವದ ಆಚರಣೆಗಾಗಿ ಭಾರತ ಸರ್ಕಾರ ಪ್ರಾರಂಭಿಸಿರುವ **"ವಿಕಸಿತ ಭಾರತ @ 2047 ಪರಿಕಲ್ಪನೆಯ ಕುರಿತು ಅಭಿಪ್ರಾಯಗಳು: ಯುವಧ್ವನಿ ವೇದಿಕೆ"** ಎನ್ನುವ ಕಾರ್ಯಕ್ರಮದಲ್ಲಿ ರಾಜ್ಯದ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ವಿದ್ಯಾರ್ಥಿ-ವಿದ್ಯಾರ್ಥಿನಿಯರು ಭಾಗವಹಿಸುವಂತೆ ಪ್ರೋತ್ಸಾಹಿಸಬೇಕಾಗಿದೆ.

**"ವಿಕಸಿತ ಭಾರತ @ 2047 ಪರಿಕಲ್ಪನೆಯ ಕುರಿತು ಅಭಿಪ್ರಾಯಗಳು: ಯುವಧ್ವನಿ ವೇದಿಕೆ" ಕಾರ್ಯಕ್ರಮದ ವಿವರಗಳು:**

ಸದರಿ ಕಾರ್ಯಕ್ರಮದಲ್ಲಿ ಐದು ವಿಷಯಾಧಾರಿತ ಕ್ಷೇತ್ರಗಳ ಕುರಿತು ಯುವಜನರ ಅಭಿಪ್ರಾಯಗಳನ್ನು ಸಂಗ್ರಹಿಸಲಾಗುತ್ತಿದ್ದು, ಅವು ಈ ಕೆಳಕಂಡಂತಿವೆ:

### 5 thematic areas through Vikasit Bharat 2047- Voice of Youth.

1. Empowered Indians (Education, Health, Sports, Nari Shakti, Caring Society, Culture)
2. Thriving and sustainable Economy (Agriculture, Industry, Services, Infrastructure, Energy, Green Economy, Cities)

3. Innovation, Science and Technology (Research & Development, Digital, Startups)
4. Good Governance and Security.
5. India in the World.

**ಅಥವಾ**

1. ಸಶಕ್ತ ಭಾರತೀಯರು (ಶಿಕ್ಷಣ. ಆರೋಗ್ಯ. ಕ್ರೀಡೆ. ನಾರಿ ಶಕ್ತಿ. ಕಾಳಜಿಯುಳ್ಳ ಸಮಾಜ. ಸಂಸ್ಕೃತಿ)
2. ಅಭಿವೃದ್ಧಿ ಹೊಂದುತ್ತಿರುವ ಮತ್ತು ಸುಸ್ಥಿರ ಆರ್ಥಿಕತೆ (ಕೃಷಿ. ಕೈಗಾರಿಕೆ. ಸೇವೆಗಳು. ಮೂಲಸೌಕರ್ಯ. ಇಂಧನ. ಹಸಿರು ಆರ್ಥಿಕತೆ. ನಗರಗಳು)
3. ನಾವೀನ್ಯತೆ. ವಿಜ್ಞಾನ ಮತ್ತು ತಂತ್ರಜ್ಞಾನ (ಸಂಶೋಧನೆ ಮತ್ತು ಅಭಿವೃದ್ಧಿ. ಡಿಜಿಟಲ್. ಸ್ಟಾರ್ಟ್‌ಅಪ್‌ಗಳು)
4. ಉತ್ತಮ ಆಡಳಿತ ಮತ್ತು ಸುಭದ್ರತೆ.
5. ವಿಶ್ವದಲ್ಲಿ ಭಾರತ.

- ಮೇಲ್ಕಂಡ ಯಾವುದೇ ವಿಷಯಾಧಾರಿತ ಕ್ಷೇತ್ರಗಳ ಕುರಿತು 2047ನೇ ಇಸವಿಯ ವೇಳೆಗೆ ಭಾರತ ಸಾಧಿಸಬೇಕಾದ ಗುರಿಗಳು, ಸಾಧನೆಯ ವಿಧಾನ, ಅದರಿಂದ ದೊರೆಯುವ ಪ್ರಯೋಜನಗಳು, ಭಾರತ ವಿಶ್ವಮಾನ್ಯತೆಯನ್ನು ಪಡೆಯಬಹುದಾದ ಸಾದ್ಯತೆಗಳು ಇವೇ ಮೊದಲಾದ ಅಂಶಗಳನ್ನು ಒಳಗೊಂಡಂತೆ ವಿದ್ಯಾರ್ಥಿಗಳು ತಮ್ಮ ಕನಸುಗಳು, ಅಭಿಪ್ರಾಯಗಳು ಮತ್ತು ಸಲಹೆಗಳನ್ನು ಭಾರತ ಸರ್ಕಾರದ ವೆಬ್‌ಸೈಟ್: https://innovateindia.mygov.in/viksitbharat2047/ ಗೆ ಲಾಗಿನ್ ಆಗುವ ಮೂಲಕ ಹಂಚಿಕೊಳ್ಳಬಹುದು.
- ಹೀಗೆ ಸಂಗ್ರಹವಾದ ಅಭಿಪ್ರಾಯಗಳಲ್ಲಿ ಪ್ರತಿಯೊಂದು ವಿಷಯಾಧಾರಿತ ಕ್ಷೇತ್ರಕ್ಕೆ ಸಂಬಂದಪಟ್ಟಂತೆ ರಾಷ್ಟ್ರಮಟ್ಟದಲ್ಲಿ ಅತ್ಯುತ್ತಮವಾದ ವಿಚಾರಗಳಿಗೆ ಪ್ರಥಮ ಬಹುಮಾನ-ರೂ.5 ಲಕ್ಷಗಳು. ದ್ವಿತೀಯ ಬಹುಮಾನ-ರೂ.3 ಲಕ್ಷಗಳು ಹಾಗೂ ತೃತೀಯ ಬಹುಮಾನ- ರೂ. 2 ಲಕ್ಷಗಳನ್ನು ನೀಡಲಾಗುವುದು.
- ವಿದ್ಯಾರ್ಥಿಗಳು ಒಂದಕ್ಕಿಂತ ಹೆಚ್ಚು/ಎಲ್ಲ ವಿಷಯಾಧಾರಿತ ಕ್ಷೇತ್ರಗಳ ಕುರಿತು ತಮ್ಮ ಅಭಿಪ್ರಾಯಗಳನ್ನು ಸಲ್ಲಿಸಬಹುದಾಗಿದೆ.
- ವಿದ್ಯಾರ್ಥಿಗಳು ತಮ್ಮ ಅಭಿಪ್ರಾಯಗಳನ್ನು ಕನ್ನಡ/ ಇಂಗ್ಲಿಷ್/ ಹಿಂದಿ ಇತ್ಯಾದಿ ಬಾಷೆಗಳಲ್ಲಿ ಹಂಚಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ.
- ವಿದ್ಯಾರ್ಥಿಗಳು ಮೇಲೆ ಸೂಚಿಸಿದ ವೆಬ್‌ಸೈಟಿನಲ್ಲಿ ತಮ್ಮ ವಿಚಾರಗಳನ್ನು ಹಂಚಿಕೊಳ್ಳಲು ಕೊನೆಯ ದಿನಾಂಕ: 21-01-2024.

**ಈ ಕಾರ್ಯಕ್ರಮದ ಅನುಷ್ಠಾನಕ್ಕೆ ಸಂಬಂಧಪಟ್ಟಂತೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳ ಪ್ರಾಂಶುಪಾಲರು ನಿರ್ವಹಿಸಬೇಕಾದ ಕರ್ತವ್ಯಗಳು ಈ ಕೆಳಕಂಡಂತಿವೆ:**

1. **"ವಿಕಸಿತ ಭಾರತ @ 2047 ಪರಿಕಲ್ಪನೆಯ ಕುರಿತು ಅಭಿಪ್ರಾಯಗಳು: ಯುವಧ್ವನಿ ವೇದಿಕೆ"** ಕಾರ್ಯಕ್ರಮದ ಕುರಿತು ತಮ್ಮ ಕಾಲೇಜುಗಳಲ್ಲಿ ತರಗತಿಗಳಲ್ಲಿ/ಅಸೆಂಬ್ಲಿಯಲ್ಲಿ ಮತ್ತೆಮತ್ತೆ ವಿದ್ಯಾರ್ಥಿಗಳಿಗೆ ತಿಳಿಸಿಹೇಳುವುದು ಹಾಗೂ ಭಿತ್ತಿಪತ್ರಗಳನ್ನು ಪ್ರದರ್ಶಿಸುವ ಮೂಲಕ ವಿದ್ಯಾರ್ಥಿಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸುವಂತೆ ಪ್ರೋತ್ಸಾಹಿಸುವುದು.
2. ತಮ್ಮ ಕಾಲೇಜಿನ ಒಬ್ಬರು ಅಧ್ಯಾಪಕರಿಗೆ **"ವಿಕಸಿತ ಭಾರತ @ 2047 ಪರಿಕಲ್ಪನೆಯ ಕುರಿತು ಅಭಿಪ್ರಾಯಗಳು: ಯುವಧ್ವನಿ ವೇದಿಕೆ"** ಕಾರ್ಯಕ್ರಮದ ಕುರಿತಾಗಿ ವಿದ್ಯಾರ್ಥಿಗಳಿಗೆ ತಿಳಿಯುವಂತೆ ಪ್ರಚಾರ, ಕಾರ್ಯಕ್ರಮದಲ್ಲಿ ಭಾಗವಹಿಸಲು ವಿದ್ಯಾರ್ಥಿಗಳಿಗೆ ಪ್ರೋತ್ಸಾಹ, ವೆಬ್ ಸೈಟಿಗೆ ಲಾಗಿನ್ ಆಗಲು, ಅಭಿಪ್ರಾಯಗಳನ್ನು ಹಂಚಿಕೊಳ್ಳಲು ವಿದ್ಯಾರ್ಥಿಗಳಿಗೆ ನೆರವಾಗುವುದು, ಕಾರ್ಯಕ್ರಮವನ್ನು ಕಾಲೇಜಿನಲ್ಲಿ ಅನುಷ್ಠಾನಗೊಳಿಸಿದ ಕುರಿತು ವರದಿ ಸಿದ್ಧಪಡಿಸುವದು ಇವೇ ಮೊದಲಾದ ಜವಾಬ್ದಾರಿಯನ್ನು ವಹಿಸುವುದು.
3. ತಮ್ಮ ಕಾಲೇಜಿನ ಎಲ್ಲ ಅಧ್ಯಾಪಕರಿಗೆ ಸದರಿ ಕಾರ್ಯಕ್ರಮದಲ್ಲಿ ನೀಡಿರುವ 5 ವಿಷಯಾಧಾರಿತ ಕ್ಷೇತ್ರಗಳ ಕುರಿತು ವಿದ್ಯಾರ್ಥಿಗಳಿಗೆ ವಿವರಿಸುವುದು, ಸಂಶಯಗಳನ್ನು ಪರಿಹರಿಸುವುದು, ತಮ್ಮ

ಅಭಿಪ್ರಾಯಗಳನ್ನು ಸುಸಂಬದ್ಧವಾಗಿ ಮತ್ತು ಸ್ಪಷ್ಟವಾಗಿ ಬರವಣಿಗೆಯಲ್ಲಿ ವ್ಯಕ್ತಪಡಿಸಲು ವಿದ್ಯಾರ್ಥಿಗಳಿಗೆ ನೆರವಾಗುವಂತೆ ಸೂಚಿಸುವುದು.

4. ಸಂಬಂಧಪಟ್ಟ ಪ್ರಾದೇಶಿಕ ಜಂಟಿ ನಿರ್ದೇಶಕರ ಕಛೇರಿಗೆ ಸದರಿ ಕಾರ್ಯಕ್ರಮದ ಅನುಷ್ಠಾನದ ಕುರಿತು ಅಂಕಿಅಂಶಗಳನ್ನು ಒಳಗೊಂಡ ವಿವರಪೂರ್ಣ ವರದಿಯನ್ನು ದಿನಾಂಕ: 23-01-2024ರ ವೇಳೆಗೆ ತಪ್ಪದೆ ಸಲ್ಲಿಸುವುದು.

**ಪ್ರಾದೇಶಿಕ ಜಂಟಿ ನಿರ್ದೇಶಕರ ಕರ್ತವ್ಯಗಳು:**

1. ತಮ್ಮ ಕಚೇರಿ ವ್ಯಾಪ್ತಿಯ ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಸದರಿ ಕಾರ್ಯಕ್ರಮದ ಅನುಷ್ಠಾನ ನಡೆಯುವಂತೆ ಮೇಲ್ವಿಚಾರಣೆ ನಡೆಸುವುದು.
2. ತಮ್ಮ ವಲಯವ್ಯಾಪ್ತಿಯ ಕಾಲೇಜುಗಳಿಂದ ಸ್ವೀಕೃತವಾದ ವರದಿಗಳನ್ನು ಕ್ರೋಢೀಕರಿಸಿ, ಕ್ರೋಢೀಕೃತ ವರದಿಯನ್ನು ಇಲಾಖೆಯ ಕೇಂದ್ರ ಕಚೇರಿಯ ಇ-ಮೇಲ್ : dce.placementcell@gmail.com ಕ್ಕೆ ದಿನಾಂಕ: 25-01-2024ರೊಳಗೆ ಸಲ್ಲಿಸುವುದು.

(ಪ್ರಸ್ತಾವನೆಯು ಮಾನ್ಯ ಆಯುಕ್ತರಿಂದ ಅನುಮೋದಿಸಲ್ಪಟ್ಟಿದೆ)

**ಕಾಲೇಜು ಶಿಕ್ಷಣ ನಿರ್ದೇಶಕರು**

**ಇವರಿಗೆ:**

1. ಕಾಲೇಜು ಶಿಕ್ಷಣ ಇಲಾಖೆಯ ಎಲ್ಲಾ ಪ್ರಾದೇಶಿಕ ಕಛೇರಿಯ ಜಂಟಿ ನಿರ್ದೇಶಕರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
2. ಸರ್ಕಾರಿ ಕಾಲೇಜುಗಳ ಪ್ರಾಂಶುಪಾಲರುಗಳಿಗೆ-ಮಾಹಿತಿ ಹಾಗೂ ಮುಂದಿನ ಅಗತ್ಯ ಕ್ರಮಕ್ಕಾಗಿ.
3. ಮಾಹಿತಿ ಅಧಿಕಾರಿಗಳು, ಮಾಹಿತಿ ವಿಭಾಗ, ಕೇಂದ್ರ ಕಛೇರಿ, ಬೆಂಗಳೂರು-ಸದರಿ ಆದೇಶವನ್ನು ಇಲಾಖಾ ವೆಬ್-ಸೈಟ್ ನಲ್ಲಿ ಪ್ರಕಟಿಸುವ ಸಂಬಂಧ ಅಗತ್ಯ ಕ್ರಮಕ್ಕಾಗಿ.
4. ಕಛೇರಿ ಪ್ರತಿ.

**ಪ್ರತಿಗಳು:**

1. ಕಾರ್ಯನಿರ್ವಾಹಕ ನಿರ್ದೇಶಕರು, ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ತು, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿಗಳು (ಕಾಲೇಜು ಶಿಕ್ಷಣ), ಉನ್ನತ ಶಿಕ್ಷಣ ಇಲಾಖೆ, 6ನೇ ಮಹಡಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು-01.